# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಶಿಕ್ಷಣ ಸ್ಥಾಯಿ ಸಮಿತಿಯ ದಿನಾಂಕ: 29.01.2013ರಂದು ನಡೆದ ಸಭೆಯ ನಡವಳಿ.

| ಕ್ರ. ಸ | ಹಾಜರಿದ್ದ ಮಾನ್ಯ ಅಧ್ಯಕ್ಷರು ಹಾಗೂ ಮಾನ್ಯ ಸದಸ್ಯರು | ಪದನಾಮ | ಕ್ರ. ಸ | ಹಾಜರಿದ್ದ ಅಧಿಕಾರಿಗಳ ಹೆಸರು | ಪದನಾಮ |
|---|---|---|---|---|---|
| 1 | ಶ್ರೀ.ಬಿ.ಗೋವಿಂದರಾಜು | ಅಧ್ಯಕ್ಷರು | 1 | ಶ್ರೀ.ಬಿ.ಇ.ಗೋವಿಂದರಾಜು | ಕೌನ್ಸಿಲ್ ಕಾರ್ಯದರ್ಶಿ |
| 2 | ಶ್ರೀ.ಅಶ್ವಥ್‌ನಾರಾಯಣ ಗೌಡ | ಸದಸ್ಯರು | 2 | ಶ್ರೀ.ಹನುಮಂತರಾಜು | ಶಿಕ್ಷಣಾಧಿಕಾರಿ |
| 3 | ಶ್ರೀ.ಡಿ.ವೆಂಕಟೇಶ್ | ಸದಸ್ಯರು | 3 | ಶ್ರೀ.ವಿ.ವೆಂಕಟಕೃಷ್ಣಯ್ಯ | ದೈಹಿಕ ಶಿಕ್ಷಣಾಧಿಕಾರಿ |
| 4 | ಶ್ರೀ.ಎನ್.ಎಂ.ಕೃಷ್ಣ ಮೂರ್ತಿ | ಸದಸ್ಯರು | 4 | ಶ್ರೀ.ಡಿ.ಪಿ.ಮಹೇಂದ್ರ ಸ್ವಾಮಿ | ಆಟದ ಮೈದಾನದ ಮೇಲ್ವಿಚಾರಕರು |
| 5 | ಶ್ರೀಮತಿ.ಎನ್.ಜಿ.ಜಯರತ್ನ | ಸದಸ್ಯರು | | | |
| 6 | ಶ್ರೀಮತಿ.ವಸಂತಕುಮಾರಿ | ಸದಸ್ಯರು | | | |
| 7 | ಶ್ರೀಮತಿ.ಸೈಯದ್ ಹಸೀನಾತಾಜ್ | ಸದಸ್ಯರು | | | |
| 8 | ಶ್ರೀ.ಎಂ.ನಾಗರಾಜ್ | ಸದಸ್ಯರು | | | |
| 9 | ಶ್ರೀ.ಎಂ.ಉದಯಶಂಕರ್ | ಸದಸ್ಯರು | | | |
| 10 | ಶ್ರೀ.ಎನ್.ಎಂ,ಹನುಮಂತೇಗೌಡ | ಸದಸ್ಯರು | | | |

ಸಭೆಯು ಬೆಳ್ಳಿಗೆ 11.00 ಘಂಟೆಗೆ ಪ್ರಾರಂಭವಾಗಿದ್ದು, ಸಭೆಗೆ ಹಾಜರಿದ್ದ ಮಾನ್ಯ ಸದಸ್ಯರುಗಳನ್ನು ಹಾಗೂ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸುತ್ತಾ, ಹಿಂದಿನ ಸಭೆಯ ನಡೆವಳಿಕೆಗಳನ್ನು ಓದಿ ದಾಖಲು ಮಾಡಲಾಯಿತು. ಕಾರ್ಯ ಕ್ರಮದಪಟ್ಟಿಯಲ್ಲಿರುವ, ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಲು ಎಲ್ಲಾ ಸದಸ್ಯರ ಸಹಕಾರವನ್ನು ಕೋರಲಾಯಿತು.

**ವಿಷಯ ಸಂಖ್ಯೆ:ಶಿ.ಸ್ಥಾ.ಸ/18/12-13**

ವಿಷಯ: 2012-13ನೇ ಸಾಲಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಶಾಲಾ/ಕಾಲೇಜುಗಳ ವಿದ್ಯಾರ್ಥಿಗಳಿಗೆ ಮ್ಯಾರಥಾನ್ ಓಟವನ್ನು ಆಯೋಜಿಸುವ ಬಗ್ಗೆ.

~******~

ವಿಶೇಷ ಆಯುಕ್ತರವರ ಟಿಪ್ಪಣಿ ಸಂಖ್ಯೆ: ಪಿ.ಇ.ಒ/ಪಿ.ಆರ್/55/12-13, ದಿನಾಂಕ: 09.01.2013ರಂದು ವಿವರಿಸಿರುವಂತೆ, 2012-13ನೇ ಸಾಲಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಹಸಿರು ಮರಗಳು ಕಡಿಮೆಯಾಗುತ್ತಿದ್ದು, ವಾಹನಗಳ ಸಂಚಾರ ದಟ್ಟಣೆ ಹೆಚ್ಚಾಗುತ್ತಿರುವುದರಿಂದ ವಾಯುಮಾಲಿನ್ಯ ಹಾಗೂ ಶಬ್ದ ಮಾಲಿನ್ಯದಿಂದಾಗಿ ಬೆಂಗಳೂರು ನಾಗರೀಕರ ಆರೋಗ್ಯವು ದಿನದಿಂದ ದಿನಕ್ಕೆ ಹದಗೆಡುತ್ತಿರುವುದರಿಂದ ಪಾಲಿಕೆ ವ್ಯಾಪ್ತಿಯ ನಾಗರೀಕರನ್ನು ಜನ ಜಾಗೃತಿಗೊಳಿಸುವ ಹಿನ್ನೆಲೆಯಲ್ಲಿ ಪಾಲಿಕೆ ವ್ಯಾಪ್ತಿಯ ಶಾಲಾ/ಕಾಲೇಜುಗಳ ವಿದ್ಯಾರ್ಥಿಗಳಿಂದ ಮ್ಯಾರಥಾನ್ ಓಟವನ್ನು ಆಯೋಜಿಸಿ, ಸದರಿ ಓಟದಲ್ಲಿ ವಿಜೇತರರಾದವರಿಗೆ ಬಹುಮಾನವನ್ನು ವಿತರಿಸಲು ದಿನಾಂಕ: 12.01.2013ರಂದು ನಡೆಸಲು ಮತ್ತು ಮುಕ್ತಾಯ ಸಮಾರಂಭವನ್ನು ನಡೆಸಲು ಉದ್ದೇಶಿಸಲಾಗಿದೆ. ಸದರಿ ಮ್ಯಾರಥಾನ್ ಓಟ ನಡೆಯುವ ದಿನಾಂಕದಂದು ತಗಲುವ ಅಂದಾಜು ವೆಚ್ಚದ ವಿವರಗಳು, ಈ ಕೆಳಕಂಡಂತ್ತಿರುತ್ತದೆ.

Office of the I T Advisor
No. 1123
Date. 11/3
Bangalore ... Palike

| | | |
|---|---|---|
| | ... ಅತಿಥಿಗಳಿಗೆ ಹೂವಿನ ಹಾರ/ಹಣ್ಣಿನ ಬುಟ್ಟಿಗಳು, ಕಾಫಿ, ಬಿಸ್ಕತ್‌ಗಳನ್ನು ಕೊಳ್ಳಲು ತಗಲುವ ಅಂದಾಜು ವೆಚ್ಚ ರೂ. | |
| 2 | ವಿದ್ಯಾರ್ಥಿಗಳಿಗೆ ಮ್ಯಾರಥಾನ್ ಓಟದ ಸಂದರ್ಭದಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ಪ್ರಥಮ ಚಿಕಿತ್ಸೆ, ಗ್ಲೂಕೋಸ್ ಪುಡಿಯನ್ನು ಖರೀದಿಸಲು ತಗಲುವ ಅಂದಾಜು ವೆಚ್ಚ ರೂ. | 3,000.00 |
| 3 | ಅತೀ ಅವಶ್ಯಕವಾಗಿ ಬೇಕಾಗಿರುವ ಪರಿಸರದ ಜಾಗೃತಿ ಮೂಡಿಸುವ ಬ್ಯಾನರ್‌ಗಳು, ಜಾಹೀರಾತು ನೀಡುವ ಫಲಕಗಳನ್ನು ಖರೀದಿಸಲು ತಗಲುವ ಅಂದಾಜು ವೆಚ್ಚ ರೂ. | 40,000.00 |
| 4 | 500 ವಿದ್ಯಾರ್ಥಿಗಳಿಗೆ, 50 ಮೇಲ್ವಿಚಾರಕರಿಗೆ, ಮುಖ್ಯ ಅತಿಥಿಗಳಿಗೆ/ಅತಿಥಿಗಳಿಗೆ/ಅಧಿಕಾರಿಗಳಿಗೆ ಒಟ್ಟು 750 ಜನರಿಗೆ ಲಘು ಉಪಹಾರ ನೀಡಲು ತಗಲುವ ಅಂದಾಜು ವೆಚ್ಚ ರೂ. | 30,000.00 |
| 5 | ಓಟದ ಸಂದರ್ಭದಲ್ಲಿ ತೀರ್ಪುಗಾರರಿಗೆ, ರಸ್ತೆಯ ಸುರಕ್ಷತೆಯನ್ನು ನಿರ್ವಹಿಸುವವರಿಗೆ ಸಂಭಾವನೆ ಭತ್ಯೆ ನೀಡಲು ಒಬ್ಬರಿಗೆ ರೂ.200/-ರಂತೆ 40 ಜನರಿಗೆ ಬೇಕಾದ ಅಂದಾಜು ಮೊತ್ತ ರೂ. | 8,000.00 |
| 6 | ಓಟದ ಸಂದರ್ಭದಲ್ಲಿ ಕುಡಿಯುವ ನೀರಿನ ವ್ಯವಸ್ಥೆಗೆ ಬೇಕಾದ ಅಂದಾಜು ಮೊತ್ತ ರೂ. | 6,000.00 |
| 7 | ಸದರಿ ಕಾರ್ಯಕ್ರಮದಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಪ್ರಯಾಣ ದರವನ್ನು ನೀಡಲು ಒಬ್ಬ ವಿದ್ಯಾರ್ಥಿಗಳಿಗೆ ರೂ.50/-ರಂತೆ 500 ವಿದ್ಯಾರ್ಥಿಗಳಿಗೆ ಹಾಗೂ 50 ಮೇಲ್ವಿಚಾರಕರಿಗೆ ಸೇರಿ ಒಟ್ಟು 550 ಜನಕ್ಕೆ ಎ.ಸಿ. ಬಿಲ್ಲು ಮುಖಾಂತರ ಕ್ರಮ ವಹಿಸಲು ಬೇಕಾದ ಮೊತ್ತ ರೂ. | 27,500.00 |
| | ಒಟ್ಟು ಮೊತ್ತ ರೂ. | 1,54,500.00 |

ಘೋಷ್ವಾರೆ-02

| | | |
|---|---|---|
| 1 | ಒಬ್ಬ ವಿದ್ಯಾರ್ಥಿಗೆ ಒಂದು ಟೀ ಶರ್ಟ್‌ನಂತೆ ಓಟದಲ್ಲಿ ಭಾಗವಹಿಸುವ 500 ವಿದ್ಯಾರ್ಥಿಗಳಿಗೆ ಟೀ ಶರ್ಟ್‌ಗಳನ್ನು (ಪಾಲಿಕೆಯ ಮೊಹರುಳ್ಳ) ಕರ್ನಾಟಕ ಪಾರದರ್ಶಕ ನಿಯಮಾವಳಿ ಅನುಸಾರ ಪ್ರತಿಷ್ಠಿತ ಮಳಿಗೆದಾರರಿಂದ ದರ ಪಟ್ಟಿಯನ್ನು ಆಹ್ವಾನಿಸುವ ಮೂಲಕ ಖರೀದಿಸಿ ವಿತರಿಸಲು ಒಂದು ಟೀ ಶರ್ಟ್‌ಗೆ ರೂ.195ರಂತೆ 500 ವಿದ್ಯಾರ್ಥಿಗಳಿಗೆ ತಗಲುವ ಅಂದಾಜು ಮೊತ್ತ ರೂ.(500X195=97,500.00) | 97,500.00 |
| 2 | ಮ್ಯಾರಥಾನ್ ಓಟದಲ್ಲಿ ವಿಜೇತರಾದ ಕ್ರೀಡಾಪಟುಗಳಿಗೆ ಕಾಲೇಜು ಮತ್ತು ಪ್ರೌಢ ಶಾಲೆಗಳಿಂದ 2 ಪ್ರಥಮ, 2 ದ್ವಿತೀಯ ಹಾಗೂ 2 ತೃತೀಯ ಬಹುಮಾನದ ಪಾರಿತೋಷಕಗಳನ್ನು ನೀಡಲು ಪ್ರತಿಷ್ಠಿತ ಮಳಿಗೆದಾರರಿಂದ ದರ ಪಟ್ಟಿಯನ್ನು ಆಹ್ವಾನಿಸುವುದರ ಮೂಲಕ ಖರೀದಿಸಲು ತಗಲುವ ಅಂದಾಜು ವೆಚ್ಚ ರೂ. | 15,000.00 |
| 3 | ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಶಾಮೀಯಾನ, ಕುರ್ಚಿ, ಟೇಬಲ್, ಮೈಕ್‌ಸೆಟ್ ಅನ್ನು ಬಾಡಿಗೆಗೆ ಪಡೆಯಲು ಪ್ರಮುಖ ಮಳಿಗೆದಾರರಿಂದ ದರಪಟ್ಟಿಯನ್ನು ಆಹ್ವಾನಿಸವುದರ ಮೂಲಕ ಕ್ರಮ ವಹಿಸಲು ತಗಲುವ ಅಂದಾಜು ವೆಚ್ಚ ರೂ. | 25,000.00 |
| 4 | ಕಾರ್ಯಕ್ರಮದಂದು ಛಾಯಚಿತ್ರಗಳನ್ನು ತೆಗೆಯಲು ಪ್ರಮುಖ ಮಳಿಗೆದಾರರಿಂದ ದರಪಟ್ಟಿಯನ್ನು ಆಹ್ವಾನಿಸುವುದರ ಮೂಲಕ ಖರೀದಿಸಲು ತಗಲುವ ಅಂದಾಜು ವೆಚ್ಚ ರೂ. | 8,000.00 |
| 5 | ವಿದ್ಯಾರ್ಥಿಗಳನ್ನು ಕರೆ ತರುವ ಮೇಲ್ವಿಚಾರಕರು 50 ಜನಕ್ಕೆ, ಅಧಿಕಾರಿಗಳು 200 ಜನಕ್ಕೆ ಹಾಗೂ ತೀರ್ಪುಗಾರರಿಗೆ ತಲಾ ಒಬ್ಬರಿಗೆ ಒಂದೊಂದು ಟೀ ಶರ್ಟ್‌ನ್ನು ಖರೀದಿಸಲು ಪ್ರಮುಖ ಮಳಿಗೆದಾರರಿಂದ ದರ ಪಟ್ಟಿಯನ್ನು ಆಹ್ವಾನಿಸುವುದರ ಮೂಲಕ ಖರೀದಿಸಲು ತಗಲುವ ಅಂದಾಜು ವೆಚ್ಚ ರೂ. | 50,000.00 |
| | **ಒಟ್ಟು ಮೊತ್ತ ರೂ.** | **1,95,500.00** |
| | **ಘೋಷ್ವಾರೆ 1 ಮತ್ತು ಘೋಷ್ವಾರೆ 2ರ ಒಟ್ಟು ಸಮಗ್ರ ಮೊತ್ತ ರೂ.** | **3,50,000.00** |

ಮೇಲೆ ನಮೂಧಿಸಿರುವ ಮೊತ್ತದಲ್ಲಿ ಮೇಲ್ಕಂಡ ಕಾರ್ಯಕ್ರಮಗಳನ್ನು ಘೋಷ್ವಾರೆ-01ರಲ್ಲಿನ ಕ್ರಮ ಸಂಖ್ಯೆ-01 ರಿಂದ 07ರವರೆಗೆ ಮತ್ತು ಘೋಷ್ವಾರೆ-02ರಲ್ಲಿ ಕ್ರಮ ಸಂಖ್ಯೆ-01 ರಿಂದ 05ರವರೆಗಿನ ಅಂಶಗಳ ಆಧಾರದ ಮೇಲೆ ಮ್ಯಾರಥಾನ್ ಓಟ ನಡೆಯುವ ಕಾರ್ಯಕ್ರಮಕ್ಕೆ ಸಮಗ್ರ ಮೊತ್ತ ರೂ.3,50,000/-ಗಳು ವೆಚ್ಚವಾಗುವ ಸಂಭವವಿರುವುದರಿಂದ, ಸದರಿ ವೆಚ್ಚವನ್ನು 2012-13ನೇ ಸಾಲಿನ ಆಯ-ವ್ಯಯ ಲೆಕ್ಕ ಶೀರ್ಷಿಕೆ ಪುಟ ಸಂಖ್ಯೆ 199 ರಲ್ಲಿ "24" ಸಂಸ್ಕೃತಿ ಮತ್ತು ಕ್ರೀಡೆ, ಕ್ರೀಡಾಭಿವೃದ್ಧಿ ಚಟುವಟಿಕೆಗಳು, ಮೆರವಣಿಗೆ ಮತ್ತು ಕ್ರೀಡೆಗಳು (ಪಿ0267) ಶೀರ್ಷಿಕೆಗೆ ಮೀಸಲಿರಿಸಿರುವ ಮೊತ್ತ ರೂ.30.00 ಲಕ್ಷಗಳಲ್ಲಿ ಭರಿಸಬಹುದಾಗಿರುತ್ತದೆ. ಸದರಿ ಕಾರ್ಯಕ್ರಮಗಳ ಘೋಷ್ವಾರೆ 01ರಲ್ಲಿನ ಮೊತ್ತ ರೂ.1,54,500/-ಗಳನ್ನು ಮುಂಗಡ ಹಣ ಮಂಜೂರು ಮಾಡಲು ಹಾಗೂ ಘೋಷ್ವಾರೆ 02ರಲ್ಲಿನ ಕಾರ್ಯಕ್ರಮಗಳನ್ನು ಪ್ರತ್ಯೇಕ ವೆಚ್ಚಗಳಿಗೆ ಅನುಗುಣವಾಗಿ ಪ್ರತಿಷ್ಠಿತ ಮಳಿಗೆದಾರರುಗಳಿಂದ ದರಪಟ್ಟಿಯನ್ನು ಆಹ್ವಾನಿಸುವುದರ ಮೂಲಕ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ತಗಲುವ ವೆಚ್ಚ ರೂ.1,95,500/-ಗಳನ್ನು ಮಂಜೂರು ಮಾಡಲು ಶಿಕ್ಷಣ ಮತ್ತು ಕ್ರೀಡಾ ಸ್ಥಾಯಿ ಸಮಿತಿಯ ಮುಂದೆ ಅನುಮೋದನೆಗಾಗಿ ಮಂಡಿಸಿರುವ ಟಿಪ್ಪಣಿ.

ಅಂತಿಮ ಪರೀಕ್ಷಾ ಪಟ್ಟಿಯು ಪ್ರಕಟವಾಗುವ ಸಂಭವವಿರುವುದರಿಂದ, ಈ ಕಾರ್ಯಕ್ರಮವನ್ನು ಮುಂದಿನ ಶೈಕ್ಷಣಿಕ ಸಾಲಿನಲ್ಲಿ ಕೈಗೊಳ್ಳಲು ಸಮಿತಿಯು ತೀರ್ಮಾನಿಸಿತು.

**ವಿಷಯ ಸಂಖ್ಯೆ:ಶಿ.ಸ್ಥಾ.ಸ/19/12-13**

ವಿಷಯ: ಪಾಲಿಕೆಯಲ್ಲಿ ವ್ಯಾಸಂಗ ಮಾಡುವ ಸಕಲ ವರ್ಗದ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿಯೂಟದ ವ್ಯವಸ್ಥೆ ಮಾಡುವ ಕುರಿತು.

~*~*~*~

ಆಯುಕ್ತರವರ ಟಿಪ್ಪಣಿ ಸಂಖ್ಯೆ: ವಿದ್ಯಾ(2)ಪಿ.ಆರ್/15/12-13, ದಿನಾಂಕ: 16.1.2013ರಂದು ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಿಕ್ಷಣ ಇಲಾಖೆಯಡಿ 87 ಶಿಶುವಿಹಾರ, 12 ಪ್ರಾಥಮಿಕ ಶಾಲೆ, 34 ಪ್ರೌಢ ಶಾಲೆಗಳು, 13 ಸಂಯುಕ್ತ ಪದವಿ ಪೂರ್ವ ಕಾಲೇಜುಗಳು, 1 ಪ್ರಥಮ ದರ್ಜೆ ಕಾಲೇಜು ಹಾಗೂ ಬಿ.ಬಿ.ಎಂ.ಪಿ ಮತ್ತು ಭಾರತೀಯ ವಿದ್ಯಾಭವನದ ಸಹಯೋಗದಲ್ಲಿ ಪಬ್ಲಿಕ್ ಸ್ಕೂಲ್ ಅಸ್ತಿತ್ವದಲ್ಲಿದ್ದು, ಸದರಿ ಶಾಲೆಗಳಲ್ಲಿ ವ್ಯಾಸಂಗ ಮಾಡುವ ಸಕಲ ವರ್ಗದ ವಿದ್ಯಾರ್ಥಿಗಳಿಗೆ ಪಾಲಿಕೆಯ ವತಿಯಿಂದ ಉಚಿತವಾಗಿ ಮಧ್ಯಾಹ್ನದ ಬಿಸಿಯೂಟದ ವ್ಯವಸ್ಥೆ ಮಾಡಬೇಕಾಗಿರುತ್ತದೆ.

ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಇಡಿ/108/ಎಂಎಂಎಸ್/2010, ದಿನಾಂಕ: 31.05.2010ರ ಆದೇಶದಂತೆ, 2010-11ನೇ ಶೈಕ್ಷಣಿಕ ಸಾಲಿನಿಂದ ಅಕ್ಷರ ದಾಸೋಹ ಕಾರ್ಯಕ್ರಮದ ಅಕ್ಷಯ ಪಾತ್ರ ಪ್ರತಿಷ್ಠಾನಕ್ಕೆ ವಹಿಸಿರುವ ಮಧ್ಯಾಹ್ನದ ಬಿಸಿಯೂಟದ ಕಾರ್ಯಕ್ರಮವನ್ನು ನವೀಕರಿಸುವ ಸಂದರ್ಭದಲ್ಲಿ ಆ ಸಂಸ್ಥೆಯವರು ದೇಣಿಗೆಯನ್ನು ಪಡೆಯಬಾರದು ಎಂಬ ಕಟ್ಟುನಿಟ್ಟಿನ ಷರತ್ತಿಗನುಗುಣವಾಗಿ, ಈ ಯೋಜನೆಯನ್ನು ಮುಂದುವರೆಸಬಹುದೆಂದು ಸೂಚನೆ ನೀಡಿರುವ ಮೇರೆಗೆ ಹಾಗೂ ಈ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ವಿದ್ಯಾರ್ಥಿಗಳಿಂದಾಗಲೀ, ಅವರ ಪೋಷಕರಿಂದಾಗಲೀ ಯಾವುದೇ ಹಣವನ್ನು ಸಂಗ್ರಹಿಸುವುದನ್ನು ನಿಷೇಧಿಸಿದೆ ಎಂಬ ಅಂಶದ ಆಧಾರದ ಮೇರೆಗೆ, ಕಳೆದ 2011-12ನೇ ಸಾಲಿನಲ್ಲಿ ಮೆ: ಅಕ್ಷಯ ಪಾತ್ರ ಫೌಂಡೇಷನ್ ರವರಿಗೆ ಸರಬರಾಜು ಆದೇಶ ನೀಡಲಾಗಿತ್ತು.

ದಿನಾಂಕ: 08.05.2012ರಂದು ಮೆ: ಅಕ್ಷಯ ಪಾತ್ರ ಫೌಂಡೇಷನ್ ರವರು ಮಾನ್ಯ ಆಯುಕ್ತ ರವರಿಗೆ ಪತ್ರವನ್ನು ವಿಳಾಸ ಮಾಡಿ ಕಳೆದ ಸಾಲಿನ ಒಡಂಬಡಿಕೆಯ ಅಂತ್ಯಗೊಂಡಿದ್ದು, 2012-13ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಅದನ್ನು ನವೀಕರಿಸಬೇಕಾದ ಅವಶ್ಯಕತೆ ಇರುತ್ತದೆ ಎಂದು ತಮ್ಮ ದಯಾಪರ ಗಮನಕ್ಕೆ ತರಬಯಸುತ್ತೇನೆ. ಅದರಂತೆ, ಶಾಲೆಯು ಪ್ರಾರಂಭವಾದ ದಿನದಿಂದಲೇ ಮಧ್ಯಾಹ್ನದ ಬಿಸಿಯೂಟವನ್ನು ಪಾಲಿಕೆಯ ಆಡಳಿತದಲ್ಲಿರುವ ಎಲ್ಲಾ ಶಾಲೆಗಳಿಗೂ ಒದಗಿಸುವುದಕ್ಕಾಗಿ ಒಡಂಬಡಿಕೆಯನ್ನು ಸಿದ್ಧಪಡಿಸಲು ಅಧಿಕೃತ ಆದೇಶವೊಂದನ್ನು ಕೊಟ್ಟಲ್ಲಿ ಪ್ರತಿಷ್ಠಾನಕ್ಕೆ ಸೂಕ್ತವಾಗಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಸಹಾಯಕವಾಗುತ್ತದೆ. ಏರುತ್ತಿರುವ ವೆಚ್ಚಗಳ ಈ ದಿನಗಳಲ್ಲಿ ಪ್ರತಿಷ್ಠಾನಕ್ಕೆ ಪ್ರತಿಯೂಟಕ್ಕೆ 20.00ರೂ.ಗಳ ವೆಚ್ಚವಾಗುತ್ತಿದ್ದರೂ ಸಹ, ಪ್ರತಿಷ್ಠಾನದ ಧ್ಯೇಯೋದ್ದೇಶಕ್ಕೆ ಅನುಗುಣವಾಗಿ ಗುಣ ಮಟ್ಟದ ವಿದ್ಯಾಭ್ಯಾಸಕ್ಕೆ ಪೂರಕವಾಗಿ ನಾವು ಕರ್ತವ್ಯ ನಿರ್ವಹಿಸುತ್ತಿರುವುದರಿಂದ ತಾವು ಪ್ರತಿ ಊಟಕ್ಕೆ ಕನಿಷ್ಠ 8.00ರೂ.ಗಳ ವೆಚ್ಚವನ್ನಾದರೂ ಭರಿಸಬೇಕೆಂದು ಪ್ರಾರ್ಥಿಸಿರುತ್ತಾರೆ.

ಪರಿಶೀಲಿಸಲಾಗಿ, ಸದರಿ ಸಂಸ್ಥೆ ಯವರು ಪಾಲಿಕೆಯ ಶಾಲಾ/ಕಾಲೇಜುಗಳಿಗೆ ತಲಾ ಒಂದು ಊಟಕ್ಕೆ ರೂ.4.50ರಂತೆ ಸರಬರಾಜು ಮಾಡುತ್ತಿದ್ದು, ನಂತರ ಅಕ್ಟೋಬರ್ 2011 ರಿಂದ ತಲಾ ಒಂದು ಊಟಕ್ಕೆ ರೂ.6.50ರಂತೆ ಒದಗಿಸಲು ಕೋರಿದ್ದ ಮೇರೆಗೆ, ಶಿಕ್ಷಣ ಮತ್ತು ಸ್ಥಾಯಿ ಸಮಿತ ರವರ ನಡವಳಿಕೆ ಸಂಖ್ಯೆ:ಶಿಸ್ಥಾಸ/16/11-12, ದಿನಾಂಕ:01.02.2012 ಮತ್ತು ಮಾನ್ಯ ಆಯುಕ್ತರು ರವರ ಆಪ್ತ ಕಾರ್ಯಾಲಯದ ಸಂಖ್ಯೆ: ಪಿಎಸ್‌ಆರ್(ಸಿ)ಪಿಆರ್/1383/11-12, ದಿನಾಂಕ: 01.02.2012 ಹಾಗೂ ಜಂಟಿ ಆಯುಕ್ತರು(ಕಲ್ಯಾಣ) ರವರ ಆದೇಶ ದಿನಾಂಕ: 10.02.2012ರ ಆದೇಶದಂತೆ, ತಲಾ ಒಂದು ಊಟಕ್ಕೆ ರೂ.6.50ರಂತೆ ಸರಬರಾಜು ಮಾಡಲು ಮೆ: ಇಸ್ಕಾನ್ ಸಂಸ್ಥೆಯ ಅಕ್ಷಯ ಪಾತ್ರ ಫೌಂಡೇಷನ್ ರವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿತ್ತು.

ಅದರಂತೆ, ಮೆ: ಅಕ್ಷಯ ಪಾತ್ರ ಪ್ರತಿಷ್ಠಾನದವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಾಲಾ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಸಕಲ ವರ್ಗದ ವಿದ್ಯಾರ್ಥಿಗಳಿಗೆ ಹಲವು ವರ್ಷಗಳಿಂದ ಬಿಸಿಯೂಟದ ವ್ಯವಸ್ಥೆ ಮಾಡುತ್ತಿರುತ್ತಾರೆ. ಸದರಿ ಸಂಸ್ಥೆಯವರು ಪ್ರಸಕ್ತ ಸಾಲಿನ ತಲಾ ಒಂದು ಊಟಕ್ಕೆ ರೂ.8.00 ರಂತೆ ವೆಚ್ಚವನ್ನು ಭರಿಸಲು ಕೋರಿರುವುದನ್ನು ಹಾಗೂ ಒಡಂಬಡಿಕೆಯು ಅಂತ್ಯಗೊಂಡಿರುವ ಹಿನ್ನೆಲೆಯಲ್ಲಿ, ಪ್ರಸಕ್ತ 2012-13ನೇ ಶೈಕ್ಷಣಿಕ ವರ್ಷವು ದಿನಾಂಕ: 01.06.2012ರಿಂದ ಪ್ರಾರಂಭವಾಗಿರುವುದರಿಂದ, ಪಾಲಿಕೆಯ ಸಭೆಯ ಅನುಮೋದನೆ ಪಡೆಯಲು ಕಾಲಾವಕಾಶ ಬೇಕಾಗಿರುವ ಹಿನ್ನೆಲೆಯಲ್ಲಿ ಪಾಲಿಕೆಯ ಸಭೆಯ ಅನುಮೋದನೆಯನ್ನು ನಿರೀಕ್ಷಿಸಿ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಪಾಲಿಕೆಯ ಶಾಲಾ/ಕಾಲೇಜುಗಳಲ್ಲಿನ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿಯೂಟದ ವ್ಯವಸ್ಥೆಯನ್ನು ಹಿಂದಿನ (ತಲಾ ಒಂದು ಊಟಕ್ಕೆ ರೂ.6.50) ದರದಲ್ಲಿಯೇ ಒದಗಿಸುವಂತೆ ಮೆ: ಅಕ್ಷಯ ಪಾತ್ರ ಫೌಂಡೇಷನ್ ರವರಿಗೆ ದಿನಾಂಕ: 08.06.2012ರಂದು ಸರಬರಾಜು ಆದೇಶ ನೀಡಲಾಗಿರುತ್ತದೆ.

ಮುಂದುವರೆದು ದಿನಾಂಕ: 08.06.2012ರಂದು ಮೆ: ಅಕ್ಷಯ ಪಾತ್ರ ಫೌಂಡೇಷನ್ ರವರು ಮತ್ತೆ ಅಧ್ಯಕ್ಷರು, ಶಿಕ್ಷಣ ಸ್ಥಾಯಿ ಸಮಿತಿ ರವರಿಗೆ ಪತ್ರವನ್ನು ವಿಳಾಸ ಮಾಡಿ ಕಳೆದ ಸಾಲಿನ ಒಡಂಬಡಿಕೆಯು ಅಂತ್ಯಗೊಂಡಿದ್ದು, 2012-13ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ

ಒಡಂಬಡಿಕೆಯನ್ನು ಸಿದ್ಧಪಡಿಸಲು ಅಧಿಕೃತ ಆದೇಶವೊಂದನ್ನು ಕೊಟ್ಟಲ್ಲಿ ಪ್ರತಿಷ್ಠಾನಕ್ಕೆ [illegible] ಕಾರ್ಯಕ್ರಮವನ್ನು [illegible] ಸಹಾಯಕವಾಗುತ್ತದೆ. ಏರುತ್ತಿರುವ ವೆಚ್ಚಗಳ ಈ ದಿನಗಳಲ್ಲಿ ಪ್ರತಿಷ್ಠಾನಕ್ಕೆ ಪ್ರತಿಯೂಟಕ್ಕೆ 20.00ರೂ.ಗಳ ವೆಚ್ಚವಾಗುತ್ತಿದ್ದರೂ ಸಹ, ಪ್ರತಿಷ್ಠಾನದ ಧ್ಯೇಯೋದ್ದೇಶಕ್ಕೆ ಅನುಗುಣವಾದ ಗುಣಮಟ್ಟದ ವಿದ್ಯಾಭ್ಯಾಸಕ್ಕೆ ಪೂರಕವಾಗಿ ನಾವು ಕರ್ತವ್ಯ ನಿರ್ವಹಿಸುತ್ತಿರುವುದರಿಂದ, ತಾವು ಪ್ರತಿ ಊಟಕ್ಕೆ ಕನಿಷ್ಠ 8.00ರೂ.ಗಳ ವೆಚ್ಚವನ್ನಾದರೂ ಭರಿಸಬೇಕೆಂದು ಪ್ರಾರ್ಥಿಸಿರುತ್ತಾರೆ.

ಪಾಲಿಕೆಯಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿಯೂಟದ ವ್ಯವಸ್ಥೆಯನ್ನು ಮಾಡಲು ಮೆ: ಇಸ್ಕಾನ್ ಸಂಸ್ಥೆಯ ಅಕ್ಷಯ ಪಾತ್ರ ಫೌಂಡೇಷನ್‌ಗೆ ಸರಬರಾಜು ಆದೇಶವನ್ನು ನೀಡುವಾಗ ಮೇಲ್ಕಂಡಂತೆ ಎರಡು ಷರತ್ತುಗಳನ್ನು ವಿಧಿಸಿ, ಕೌನ್ಸಿಲ್ ಸಭೆಯ ಅನುಮತಿಯನ್ನು ನಿರೀಕ್ಷಿಸಿ ಸರಬರಾಜು ಆದೇಶ ನೀಡಲಾಗಿದ್ದು, ಅದರಂತೆ, ದಿನಾಂಕ: 01.06.2012ರಿಂದ ಇಸ್ಕಾನ್ ಸಂಸ್ಥೆಯವರು ಪಾಲಿಕೆಯ ಶಾಲಾ/ಕಾಲೇಜು ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿಯೂಟವನ್ನು ಒದಗಿಸುತ್ತಿದ್ದಾರೆ.

ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಈ ಹಿಂದೆ ದಿನಾಂಕ: 20.06.2012ರಂದು ಶಿಕ್ಷಣ ಸ್ಥಾಯಿ ಸಮಿತಿಯ ನಿರ್ಣಯಕ್ಕಾಗಿ ಟಿಪ್ಪಣಿಯನ್ನು ಮಂಡಿಸಲಾಗಿತ್ತು. ಸದರಿ ಟಿಪ್ಪಣಿಗನುಗುಣವಾಗಿ ವಿಷಯ ಸಂಖ್ಯೆ:ಶಿಸ್ಥಾಸ/12/12-13ರಂತೆ ದಿನಾಂಕ: 11.07.2012ರಂದು ನಡೆದ ಶಿಕ್ಷಣ ಸ್ಥಾಯಿ ಸಮಿತಿಯ ನಡವಳಿಕೆಯಲ್ಲಿ ದಿನಾಂಕ: 20.06.2012ರ ಅಪರ ಆಯುಕ್ತರು(ಯೋಜನೆ)ರವರ ಟಿಪ್ಪಣಿಯನ್ನು ಭಾಗಶ: ಮಾರ್ಪಾಡಿಸುತ್ತಾ, ಪಾಲಿಕೆಯ ಆರ್ಥಿಕ ಸ್ಥಿತಿಗತಿಯ ಆಧಾರದ ಹಿನ್ನೆಲೆಯಲ್ಲಿ ಪ್ರಸಕ್ತ ಸಾಲಿನಲ್ಲೂ ಕೂಡ ಹಿಂದಿನ ಸಾಲಿನ ಪ್ರತಿ ಊಟಕ್ಕೆ ನೀಡುತ್ತಿರುವ ರೂ.6.50ನ್ನೇ ಮುಂದುವರಿಸಲು ತೀರ್ಮಾನಿಸಲಾಗಿರುತ್ತದೆ.

ಮುಂದುವರೆದು ಬೆಲೆಗಳು ಏರಿಕೆಯಾಗಿರುವ ಹಿನ್ನೆಲೆಯಲ್ಲಿ ಪ್ರತಿ ಊಟಕ್ಕೆ 8.00ರೂ.ಗಳ ವೆಚ್ಚವನ್ನು ಭರಿಸಬೇಕೆಂದು ದಿನಾಂಕ: 13.08.12 ಮತ್ತು 07.09.12ರಂದು ಪತ್ರಗಳನ್ನು ವಿಳಾಸ ಮಾಡಿ ಸದರಿ ಪ್ರಸ್ತಾವನೆಯಲ್ಲಿ ಎಲ್ಲಾ ವಸ್ತುಗಳ ದರಕ್ಕೂ ಹಾಗೂ ಏರುತ್ತಿರುವ ವೆಚ್ಚಗಳ ಈ ದಿನಗಳಲ್ಲಿ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿಯೂಟ ಒದಗಿಸಲು ಅತ್ಯವಶ್ಯಕವಾದ, ದವಸ, ಧಾನ್ಯಗಳ ಖರೀದಿ, ತರಕಾರಿ ಖರೀದಿ, ವಾಹನಕ್ಕೆ ಇಂಧನ, ವಾಹನ ಚಾಲಕರಿಗೆ ವೇತನ, ಸಿಬ್ಬಂದಿಗೆ ವೇತನ ಮುಂತಾದವುಗಳ ಬಗೆಗಿನ ದರವನ್ನು ಪರಿಶೀಲಿಸಿ, ಪ್ರತಿಷ್ಠಾನ ಧ್ಯೇಯೋದ್ದೇಶಕ್ಕೆ ಅನುಗುಣವಾಗಿ ಗುಣಮಟ್ಟದ ವಿದ್ಯಾಭ್ಯಾಸಕ್ಕೆ ಪೂರಕವಾಗಿ ನಾವು ಕರ್ತವ್ಯ ನಿರ್ವಹಿಸುತ್ತಿರುವುದರಿಂದ, ತಾವು ಪ್ರತಿ ಊಟಕ್ಕೆ 8.00ರೂ.ಗಳ ವೆಚ್ಚವನ್ನಾದರೂ ಭರಿಸಬೇಕೆಂದು ಮತ್ತೊಮ್ಮೆ ಕೋರಿರುತ್ತಾರೆ ಹಾಗೂ ಜೂನ್ 2012 ಮತ್ತು ಜುಲೈ 2012ರ ಮಾಹೆಯಲ್ಲಿ ತಲಾ ಊಟಕ್ಕೆ ರೂ.6.50ಕ್ಕೆ ಪಾವತಿ ಮಾಡಲಾಗಿರುತ್ತದೆ ಹಾಗೂ ಆಗಸ್ಟ್ 2012ರಿಂದ ಅಕ್ಟೋಬರ್ 2012ರವರೆಗಿನ ಮಾಹೆಗಳಿಗೆ ತಲಾ ಊಟಕ್ಕೆ 6.50ರಂತೆ ಮೊತ್ತವನ್ನು ಪಾವತಿಸುವ ಪ್ರಸ್ತಾವನೆಯು ಪ್ರಗತಿಯಲ್ಲಿರುತ್ತದೆ. ಸದರಿ ಸಂಸ್ಥೆಯವರು ತಲಾ ಊಟಕ್ಕೆ ರೂ.8.00ರಂತೆ ನಿಗದಿಯಾದ ಮೇಲೆ ಒಡಂಬಡಿಕೆ ಮಾಡಿಕೊಳ್ಳುವುದಾಗಿ ತಿಳಿಸುತ್ತಾ, ತಲಾ ಊಟಕ್ಕೆ ರೂ.8.00ರ ದರವನ್ನು ನಿಗದಿ ಮಾಡಬೇಕೆಂದು ಕೋರಿರುವ ಮೇರೆಗೆ, ಸದರಿ ವಿಷಯ ಸಂಬಂಧ, ಶಿಕ್ಷಣ ಸ್ಥಾಯಿ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ:** ಆಯುಕ್ತರ ದಿನಾಂಕ:16.01.2013ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.

ಬಿ.ಗೋವಿಂದರಾಜು,
ಅಧ್ಯಕ್ಷರು,
ಶಿಕ್ಷಣ ಸ್ಥಾಯಿ ಸಮಿತಿ,

ಪ್ರತಿಯನ್ನು:

1) ಮಹಾ ಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
2) ಉಪ ಮಹಾಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
3) ಆಡಳಿತ ಪಕ್ಷ/ವಿರೋಧ ಪಕ್ಷ ಹಾಗೂ ಜೆ.ಡಿ.ಎಸ್. ಪಕ್ಷದ ನಾಯಕರುಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
4) ಆಯುಕ್ತರವರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಕೋರಿದೆ.
5) ಅಪರ ಆಯುಕ್ತರು(ಯೋಜನೆ) ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
6) ಜಂಟಿ ಆಯುಕ್ತರು (ಕಲ್ಯಾಣ)ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
7) ಶಿಕ್ಷಣಾಧಿಕಾರಿ/ಕ್ರೀಡಾಧಿಕಾರಿ ಮತ್ತು ದೈಹಿಕ ಶಿಕ್ಷಣಾಧಿಕಾರಿ ರವರುಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
8) ಮಾಹಿತಿ ತಂತ್ರಜ್ಞಾನ ಸಲಹೆಗಾರರಿಗೆ ಕಳುಹಿಸುತ್ತಾ, ಅಂತರ್ಜಾಲದಲ್ಲಿ ಅಳವಡಿಸಲು ಸೂಕ್ತ ಕ್ರಮವಹಿಸುವಂತೆ ಸೂಚಿಸಿದೆ.
9) ಕಛೇರಿ ಕಡತಕ್ಕೆ.